2423

ಚಿತ್ರದುರ್ಗ ಡಿಸ್ಟ್ರಿಕ್ಟ್.

ತಾರೀಖು 4ನೇ ಸೆಪ್ಟಂಬರ್ 1896.

ಸ್ ಈ 1896-97ನೇ ಸಾಲಿಗೆ ಚಿತ್ರದುರ್ಗದ ಡಿಸ್ಟ್ರಿಕ್ಟಿನಲ್ಲಿ ಇರುವ ಡಿಸ್ಟ್ರಿಕ್ಟ್ ಫಾರೆಸ್ಟ್ಗಳಲ್ಲಿಯೂ ಪ್ರೈವೇಟೀರ್ಪಗಳಲ್ಲಿಯೂ ಪ್ಯೂಯಲ್ ರಿಜರ್ವ್ಸ್, ಗ್ರಾಮ ಫಾರೆಸ್ಟ್ಸು ಮತ್ತು ಅಮೃತಮಹಲ್ ಕಾವಲುಗಳಲ್ಲಿಯೂ ದೊರೆಯುವ ಈ ಕೆಳಿಗೆ ನಮೂದು ಮಾಡಲ್ಪಟ್ಟ್ಟ, ಪಸಾರೇ ಜಿನಸುಗಳನ್ನ ಜವಾಯಿಸಿಕೊಳ್ಳುವ ಹಕ್ಕುದಾರಿಯು ಈ ಕೆಳಗೆ ಕಂಡ ತಖ್ತೆಯಲ್ಲಿ ನಮೂದು ಮಾಡಲ್ಪಟ್ಟಿರುವ ತಾರೀಖುಗಳಲ್ಲಿಯೂ, ಸ್ಥಳಗಳಲ್ಲಿಯೂ ತಾಲ್ಲೂಕು ಅಮಲ್ದಾರ್ರು ಅಥವಾ ಡಿಪ್ಯೂಟಿ ಅಮಲ್ದಾರ್ರುಗಳ ರೂಬರೂ ತಾಲ್ಲೂಕುವಾರಾಗಿಯಾಗಲಿ ಅಥವಾ ಹೋಬಳಿವಾರಾಗಿಯಾಗಲಿ ಅಥವಾ ಮತ್ತ್ಯಾವ ರೀತಿಯಾಗಿ ಆಗಲಿ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು.

ನಂ	ತಾಲ್ಲೂಕಿನ ಹೆಸರು.	ಹರಾಜು ತಾರೀಖು.	ಹರಾಜು ಸ್ಥಳ.	ಪರಾ.
1	ಚಿತ್ರದುರ್ಗ ..	2ನೇ ಅಕ್ಟೋಬರ್ 1896 ..	ಚಿತ್ರದುರ್ಗ	
2	ಚಳ್ಳಕೆರೆ .	24ನೇ ಸೆಪ್ಟಂಬರ್ 1896 ..	ಚಳ್ಳಕೆರೆ	
3	ಹಿರಿಯೂರು ..	27ನೇ ಡಿಟೋ ಡಿಟೋ ..	ಹಿರಿಯೂರು	
4	ಹೊಳಲ್ಕೆರೆ, ಹೊಸದುರ್ಗ ..	29ನೇ ಡಿಟೋ ಡಿಟೋ ..	ಹೊಳಲ್ಕೆರೆ	
5	ದಾವಣಗೆರೆ, ಹರಿಹರ ..	27ನೇ ಡಿಟೋ ಡಿಟೋ ..	ದಾವಣಗೆರೆ	
6	ಜಗಲೂರು ..	23ನೇ ಡಿಟೋ ಡಿಟೋ ..	ಜಗಲೂರು	
7	ಮೊಳಕಾಲ್ಮುರು ..	29ನೇ ಡಿಟೋ ಡಿಟೋ ..	ಮೊಳಕಾಲ್ಮುರು	

ಪಸಾರೆ ಜಿನಸಿಗಳ ವಿವರ.

1 ಜೇನು, 2 ಜೇನುಮೇಣ, 3 ಕಹಿಬಾರಂಗು, 4 ಗೇರುಪಪ್ಪು, 5 ಹುಣಸೇಹಣ್ಣು, 6 ಹೊಂಗೇಕಾಯಿ, 7 ಬ್ಯಾಲದಹಣ್ಣು 8 ಕಲ್ಲುಹುವ್ವು, 9 ಕಾಡುಹರಳು, 10 ಗೋಂದು, 11 ಮರಡಿಪಪ್ಪು, 12 ಶೀಗೇಕಾಯಿ, 13 ತಾರೇಕಾಯಿ, 14 ಪಪ್ಪಿಚಕ್ಕೆ, 15 ಅಳಲೇಕಾಯಿ, 16 ಶೀತಾಫಲ, 17 ಜಾಲಿಗುತ್ತ, 18 ಹೊಂಗೇ ಎಲೆ, 19 ಕಲ್ಲುಹುವ್ವು.

2 ಚಹರಖಾಸ್ತುದಾರರು ಹರಾಜು ಖೈದಾದ ಕೂಡ್ಲೆ ಹರಾಜು ಮೊಬಲಗು ಪೈಕಿ ಕಾಲು ಹಿಸ್ಸೆಯನ್ನು ಶೇವಣಿ ಕಟ್ಟತಕ್ಕದ್ದು ಇದಕ್ಕೆ ತಪ್ಪಿದರೆ ಅವರನ್ನು ನಷ್ಟಕ್ಕೆ ಗುರಿ ಮಾಡಿಬಾಹು ದುಸರೇ ಹರಾಜು ಮಾಡಲ್ಪಡುವದು. ಆದರೆ ಆದರಿಂದ ವುಂಟಾಗುವ ಆದಾಯದಲ್ಲಿ ಸದರಿಯವರಿಗೆ ಏನೂ ದೊರೆಯಲಾರದು. ಹರಾಜು ಮಂಜೂರಾದ ಸಂಗತಿಯನ್ನು ಚಹರೆವಾಲ್ದಾರ್ರಿಗೆ ತಿಳಿಸಿದ ಬಂದು ವಾರದೊಳಗಾಗಿ ಬಾಕಿ ಮುಕ್ಕಾಲು ಹಿಸ್ಸೆ ಮೊಬಲಗನ್ನು ಸದರಿಯವರು ಪಾವತಿ ಮಾಡತಕ್ಕದ್ದು. ಅಪ್ಪರಲ್ಲೇ ಹಣ ಪಾವತಿ ಮಾಡಲು ತಪ್ಪಿದರೆ ದರಖಾಸ್ತುದಾರ್ರು ಮೊದಲು ಪಾವತಿ ಮಾಡಿದ ಕಾಲು ಹಿಸ್ಸೆ ಶೇವಣಿ ಮೊಬಲಗು ಸರ್ಕಾರಕ್ಕೆ ದಂಡವಾಗಿ ಕೇರಿಸಿಕೊಳ್ಳಲ್ಪಡುವದಲ್ಲದೆ ಹರಾಜಿನಲ್ಲಿ ಪಡದ ಹಕ್ಕನ್ನ ತಪ್ಪುಸಲಾದೀತು. ಪೂರಾ ಮೊಬಲಗು ಪಾವತಿಯಾದ ನಂತರ ಹರಾಜು ಕಾಲದಲ್ಲಿ ಫಾಯಿಷಾಗುವ ಪರತ್ತುಗಳ ಕಂಡು ದರಖಾಸ್ತುದಾರರು ಕರಾರು ಬರದುಕೊಡಬೇಕಾಗಿಧೆ. ಇದಕ್ಕೆ ತಪ್ಪಿದರೆ ಜಿನಸಿಯನ್ನ ರೂಢಿಸಲು ಅಪ್ಪಣೆ ಕೊಡಲ್ಪಡಲಾರದು. ಪೂರಾ ಹರಾಜು ಮೊಬಲಗಿನ ಮೇಲೆ ರೂಪಾಯಿಗೆ ಬಂದು ಆಣೆಯಂತೆ ಲೋಕಲ್ಸೆಸ್ ಕೂಡತಕ್ಕದ್ದು.

3. ಹರಾಜು ಡೆಪ್ಯೂಟಿ ಕಮ್ಮಿಷನರವರ ಮಂಜೂರಾತಿಗೆ ವಳಪಟ್ಟಿರುತ್ತೆ.

4. ಇಜಾರೆದಾರನು ಹಿಡುವಳಿ ಜಮೀನಿನಲ್ಲಿರತಕ್ಕ ಮರಗಳ ಮತ್ತು ಸ್ವಂತ ಅಮರಾಯಿಗಳಲ್ಲಿ ದೊರೆಯುವ ಫಸಲನ್ನ ರೂಢಿಸಲು ಹಕ್ಕಿರುವದಿಲ್ಲ.

5. ಇನಾಂದಾರರ, ಸ್ಥಿರಪಟ್ಟಿ ಹಕ್ಕುದಾರಿಗೆ ಇಜಾರೆದಾರ್ರು ಪ್ರವೇಶಿಸಕೂಡದು.

6. ಗ್ರಾಮ ಅಮರಾಯಿ ಫಲ ಹುಟ್ಟುವೆಳೆಯು ಮೇಲ್ಕಂಡ ಇಜಾರೆಯಲ್ಲಿ ಅಡಗಿರುವದಿಲ್ಲ.

7. ದರಖಾಸ್ತುದಾರರು ತಕ್ಕ ಸಮಾಲ್ ಮಾಡದೆ ಹೋದರೆ ಹರಾಜು ಮಾಡುವ ಆಫಿಸರರು ಹರಾಜು ನಿಲ್ಲಿಸುವದಕ್ಕೂ ಅಥವಾ ಮುಂದೆ ಮತ್ತೊಂದು ವೇಳೆ ಹರಾಜು ಮಾಡುವದಕ್ಕೂ ಸ್ವತಂತ್ರರಾಗಿರುತ್ತಾರೆ.

ಯಂ. ಎಸ್. ನಾರಾಯಣರಾವ್,
ಡೆಪ್ಯೂಟಿ ಕಮ್ಮಿಷನರ್.